ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 1, July-August, 2023, Pp. 70-77
©*IIMRD*, Mysuru

IIMRD JOURNALS
www.iimrd.com

# ಸಾಮಾಜಿಕ ನ್ಯಾಯ ಮತ್ತು ದಲಿತರನ್ನು ಸಬಲೀಕರಣಗೊಳಿಸುವಲ್ಲಿ ಡಾ. ಬಿ.ಆರ್. ಅಂಬೇಡ್ಕರ್‌ರವರ ಪಾತ್ರ

**ಧರ್ಮರಾಯ**[*]
*ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ

**ಸಾರಾಂಶ: (Abstract)**

*ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್‌ರವರು ಸಾಮಾಜಿಕ ನ್ಯಾಯ ವಿಧಾನಕ್ಕೆ ಒಂದು ದಿಕ್ಕು ದೆಸೆಯನ್ನು ನಿರ್ದೇಶಿಸಿದ ಮಹಾನ್ ಮಾನವತಾವಾದಿ. ಸಾಮಾಜಿಕ ನ್ಯಾಯಕ್ಕಾಗಿ ನಡೆಸಿದ ಹೋರಾಟಕ್ಕೆ ನಾಂದಿ ಹಾಡಿದ ಆ ಕಾಲವನ್ನು "ಸಾಮಾಜಿಕ ನ್ಯಾಯಶಕೆ" ಎಂದು ಹೇಳಬಹುದು. ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯ ತತ್ವವು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಸಮಾನತೆಗಳು ಸಮಾಜದಲ್ಲಿ ಇರಬಾರದೆಂದು ಹೇಳುತ್ತದೆ. ಒಂದು ಸಾಮಾಜಿಕ ಪದ್ಧತಿಯ ಪರಿಧಿಯಲ್ಲಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಂಬಂಧವಾದ ನ್ಯಾಯ ಎಂಬುದು, ರಾಷ್ಟ್ರೀಯ ಜೀವನಕ್ರಮದಲ್ಲಿರುವ ಎಲ್ಲ ವಲಯಗಳಿಗೆ ಅನ್ವಯಿಸಬೇಕೆಂದು ಅವರ ಮುಖ್ಯ ಉದ್ದೇಶವಾಗಿತ್ತು. ಅಂಬೇಡ್ಕರ್‌ರವರ ಸಾಮಾಜಿಕ ನ್ಯಾಯ ವಿಧಾನವು ತಾರತಮ್ಯವನ್ನು ಸೃಷ್ಟಿಸುವ ಸಾಂಪ್ರದಾಯಿಕ ವ್ಯವಸ್ಥೆಯ ತಾಯಿಬೇರನ್ನು ಕಿತ್ತು ಸಾಮಾಜಿಕ ಮತ್ತು ಆರ್ಥಿಕ ಸಮಾನತೆ, ಸ್ವಾತಂತ್ರ್ಯಕ್ಕೆ ಸರ್ಕಾರ ಭರವಸೆ ನೀಡಬೇಕೆಂಬ ಅಂಶದ ಬಗ್ಗೆ ಪಟ್ಟು ಹಿಡಿದ ಅಂಬೇಡ್ಕರ ಸಮಾಜದ ತಳವರ್ಗದ ಜನರನ್ನು ಒಗ್ಗೂಡಿಸಿ, ಅವರ ಶೋಷಣೆಯ ವಿರುದ್ಧ ಹೋರಾಟವನ್ನು ನಡೆಸಿ ಸಂವಿಧಾನ ನಿರ್ಮಾಪಕರಾಗಿ ಶಾಸನಬದ್ಧವನ್ನು ಸ್ಥಾನವನ್ನು ಕಲ್ಪಿಸಿದ್ದಾರೆ. ಈ ನಿಟ್ಟಿನಲ್ಲಿ ದಲಿತರನ್ನು ಸಬಲೀಕರಣಗೊಳಿಸುವಲ್ಲಿ ಅಂಬೇಡ್ಕರ್‌ರವರ ಚಿಂತನೆಯನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ.*

**ಮುಖ್ಯಪದಗಳು (Keywords):** ಜಾತಿ, ಅಸ್ಪೃಶ್ಯತೆ, ಅಸಮಾನತೆ, ಸಾಮಾಜಿಕ ನ್ಯಾಯ, ಸಬಲೀಕರಣ, ದಲಿತ ಪ್ರಾತಿನಿಧ್ಯತೆ, ಸ್ವಾತಂತ್ರ್ಯ, ಸಮಾನತೆ ಮತ್ತು ನಾಗರಿಕ ಹಕ್ಕುಗಳು.

## ಪೀಠಿಕೆ:

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಎಂಬುದು ಇಂದಿಗೂ ನಮ್ಮ ದೇಶದಲ್ಲಿ ಸಮರ್ಪಕವಾಗಿ ಜಾರಿಗೊಂಡಿಲ್ಲ. ಜಾತಿ, ಮತ, ಲಿಂಗ, ಅಧಿಕಾರ, ಧರ್ಮ ಮತ್ತು ಸಂಪತ್ತಿನ ಅಸಮಾನತೆಯಿಂದ ಸಮಾನತೆ ತರುವುದು, ಆ ಮೂಲಕ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಅವಕಾಶ ವಂಚಿತ ಸಮುದಾಯಗಳನ್ನು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಾಲುದಾರರನ್ನಾಗಿ ಮಾಡಲು ಶ್ರಮಿಸುವುದೇ ಸಾಮಾಜಿಕ ನ್ಯಾಯವಾಗಿದೆ ಮತ್ತು One man, One Vote, – One Value

*Please cite this article as: ಧರ್ಮರಾಯ.* (2023). ಸಾಮಾಜಿಕ ನ್ಯಾಯ ಮತ್ತು ದಲಿತರನ್ನು ಸಬಲೀಕರಣಗೊಳಿಸುವಲ್ಲಿ ಡಾ. ಬಿ.ಆರ್. ಅಂಬೇಡ್ಕರ್‌ರವರ ಪಾತ್ರ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(1). ಪು.ಸಂ.* 70–77

ಎಂಬುದಾಗಿ ಸಂವಿಧಾನದಲ್ಲಿ ಅಂಬೇಡ್ಕರ್‌ರವರ ಎಲ್ಲಾ ಭಾರತೀಯರು ಒಂದೇ ಎಂದು ಸಾಮಾಜಿಕ ನ್ಯಾಯ ನೀಡಿದ್ದಾರೆ.

**ಅಂಬೇಡ್ಕರ್‌ರವರ ದೃಷ್ಟಿಯಲ್ಲಿ ಸಾಮಾಜಿಕ ನ್ಯಾಯ:**

ಅಂಬೇಡ್ಕರ್ ಸಾಮಾಜಿಕ ನ್ಯಾಯ ಬೇಕೆಂದು ಅಧಿಕಾರದಿಂದ ಕೇಳುವುದು ಅಂದಿನ ಸಮಾಜದಲ್ಲಿ ನೆಲೆಗೊಂಡಿದ್ದ ಅಸ್ಪೃಶ್ಯತೆಯಂತಹ ದುರಾಚಾರಗಳನ್ನು ನಾಶಮಾಡಬೇಕೆಂಬ ಆಶಯದಿಂದ ಉಂಟಾದ ಜಾಗೃತಿಯಾಗಿದೆ. ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯತತ್ವ ಮೂರು ಬಗೆಯ ನ್ಯಾಯಗಳ ಸಮಗ್ರತೆಯಿಂದ ಕೂಡಿದೆ. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳ ಮೇಲೆ ಆಧಾರಪಟ್ಟು ನಡೆಯುವ ಸಾಮಾಜಿಕ, ಆರ್ಥಿಕ, ರಾಜಕೀಯ ಸಂಬಂಧಿತ ನ್ಯಾಯರೀತಿ ಅದು. ಸ್ವಾತಂತ್ರ್ಯ ಎಂಬುದು ಸಮಾನತೆಯಿಂದ ಬೇರ್ಪಡಿಸಲಾಗುವುದು, ಸಮಾನತೆ ಎಂಬುದು ಸೌಭ್ರಾತೃತ್ವದಿಂದ ಬೇರ್ಪಡಿಸಲಾಗದು. ಸಮಾನತೆಯನ್ನು ಕಳೆದುಕೊಂಡ ಸ್ವಾತಂತ್ರ್ಯವೆಂಬುದು ಬಹುಸಂಖ್ಯಾತರ ಮೇಲೆ ಕೇವಲ ಕೆಲವೇ ಮಂದಿಗೆ ಅಧಿಕಾರನ್ನು ನೀಡುತ್ತದೆಂದು ಅವರ ಅಭಿಪ್ರಾಯ. ಸ್ವಾತಂತ್ರ್ಯವನ್ನು ಕಳೆದುಕೊಂಡ ಸಮಾನತೆಯೆಂಬುದು ವ್ಯಕ್ತಿಯ ಸ್ವಾತಂತ್ರ್ಯವನ್ನು ನಾಶ ಮಾಡುತ್ತದೆ. ಸೌಭ್ರಾತೃತ್ವವನ್ನು ಕಳೆದುಕೊಂಡ ಸ್ವಾತಂತ್ರ್ಯ ಮತ್ತು ಸಮಾನತೆಗಳು ಅಸಂಪೂರ್ಣವಾದುವು. ಅವುಗಳಿಗೆ ಅರ್ಥವೇ ಇರುವುದಿಲ್ಲ. ಆದ್ದರಿಂದಲೇ ಅಂಬೇಡ್ಕರ್ "ನಾವು ಕೇವಲ ರಾಜಕೀಯ ಸಮಾನತೆಯನ್ನು ಮಾತ್ರವೇ ಹೊಂದಿರಬಾರದು, ಸಾಮಾಜಿಕ, ಆರ್ಥಿಕ ಸಮಾನತೆಗಳು ಬುನಾದಿಯಾಗಿರದ ರಾಜಕೀಯ ಸಮಾನತೆ ಉಳಿಯಲಾರದು" ಎಂದಿರುವರು.

ಈ ಕಾರಣಕ್ಕಾಗಿಯೇ ಅಂಬೇಡ್ಕರ್‌ರವರು ಹೀಗೆ ಹೇಳುತ್ತಾರೆ, "ನಾನು ಲೋಪಗಳನ್ನು ಭರಿಸುವುದಕ್ಕೆ ಸಿದ್ಧವಾಗಿದ್ದೇನೆ, ಏಕೆಂದರೆ ಈ ಜಗತ್ತು ಭ್ರಷ್ಟವಾಗಿರುವುದನ್ನು ನಾನು ಗ್ರಹಿಸಿದ್ದೇನೆ. ಆದರೆ ಯುಕ್ತವಲ್ಲದ ಆದರ್ಶಗಳನ್ನು ಬೆಳೆಸಿ ಪೋಷಿಸುವ ಸಮಾಜದಲ್ಲಿ ಅಥವಾ ಯುಕ್ತವಾದ ಆದರ್ಶಗಳನ್ನು ಹೊಂದಿದ್ದೂ ಕೂಡ ತನ್ನ ಸಾಮಾಜಿಕ ಜೀವನ ವಿಧಾನದಲ್ಲಿ ಆದರ್ಶಗಳನ್ನು ಪಾಲಿಸುವುದಕ್ಕೆ ಅಂಗೀಕರಿಸದ ಸಮಾಜದಲ್ಲಿ ಜೀವಿಸುವುದಕ್ಕೆ ನಾನು ಸಿದ್ಧವಾಗಿಲ್ಲ" ಎಂದು ಹೇಳುತ್ತಾರೆ. ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯ ವಿಧಾನ, ಸೈದ್ಧಾಂತಿಕವಾದುದು. ಊಹಾಜನಿತವಾದುದಲ್ಲ. ಅದು ಸರ್ಕಾರಜಾರಿಗೆ ತರುವುದಕ್ಕೆ ಸಾಧ್ಯವಾದ ವಿಧಾನ, ಸಮಾಜ ಅನುಸರಿಸಲು ಸಾಧ್ಯವಾದ ವಿಧಾನ. ಏಕೆಂದರೆ, ಅಂಬೇಡ್ಕರ್ ತನ್ನ ಬಾಲ್ಯದಿಂದ ಬೌದ್ಧ ಧರ್ಮವನ್ನು ಸ್ವೀಕರಿಸುವವರೆಗೆ ಅಸ್ಪೃಶ್ಯತೆ, ಜಾತಿವ್ಯವಸ್ಥೆ, ಸಾಮಾಜಿಕ ಅಸಮಾನತೆ, ತಾರತಮ್ಯದ ವಿರುದ್ಧ ಅವಿರತವಾಗಿ ಮುಂದುವರಿಸಿದ ಸುದೀರ್ಘ ಹೋರಾಟಗಳಿಂದ ರೂಪಿಸಿದೆ.

ಈ ದುಃಖದಾಯಕವಾದ ಅನುಭವದಿಂದ ದೇಶಾದ್ಯಂತ ಕೋಟ್ಯಂತರ ಅಸ್ಪೃಶ್ಯರ ನೋವನ್ನು ಮತ್ತು ದುರದೃಷ್ಟವನ್ನು ಅಂಬೇಡ್ಕರ್ ಊಹಿಸಿದರು. ಆಗಿಂದಾಗಲೇ ತಮ್ಮ ಜೀವನವನ್ನು ವಿದ್ವತ್ತನ್ನು, ತನ್ನ ಬೌದ್ಧಿಕತೆಯನ್ನು ತನ್ನವರನ್ನು ಅಸ್ಪೃಶ್ಯತೆಯ ಬಂಧನದಿಂದ ವಿಮುಕ್ತರನ್ನಾಗಿ ಮಾಡುವುದಕ್ಕಾಗಿಯೇ ಅರ್ಪಿಸಬೇಕೆಂದು ಅವರು ನಿರ್ಧರಿಸಿಕೊಂಡರು. ಅಲ್ಲಿಂದಲೇ ಅವರ ಜೀವನ ಒಂದು ಹೊಸ ತಿರುವು ಪಡೆಯಿತು. ಅಂಬೇಡ್ಕರ್‌ರವರ ಈ ನಿರ್ಣಯದಿಂದ ಭಾರತದಲ್ಲಿ ಗುಲಾಮಗಿರಿಗೆ, ತಾರತಮ್ಯಕ್ಕೆ ಮತ್ತು ಅಸ್ಪೃಶ್ಯತೆಗೆ ಬಲಿಯಾದ ಅಸಂಖ್ಯಾತ ಅಸ್ಪೃಶ್ಯರಿಗೆ ತಮ್ಮನ್ನು ಕತ್ತಲೆಯಿಂದ ಬೆಳಕಿನ ಕಡೆಗೆ, ಕಷ್ಟಗಳಿಂದ

ಸತ್ಯಾಗ್ರಹಗಳ ಕಡೆಗೆ, ಮೂಖತನದಿಂದ ಹೋರಾಟದ ಕಡೆಗೆ ಮತ್ತು ಗುಲಾಮಗಿರಿಯಿಂದ ಸ್ವಾತಂತ್ರ್ಯದೆಡೆಗೆ ನಡೆಸುವುದಕ್ಕೆ ಒಬ್ಬ ಶ್ರೇಷ್ಠ ನಾಯಕ ಲಭಿಸಿದರೆಂದು ಹೇಳಬಹುದು. ವಾಸ್ತವವಾಗಿ ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯದ ಆಧಾರದಿಂದ ರೂಪಿಸಲಾದ ಪ್ರಜಾಪ್ರಭುತ್ವ ಹಕ್ಕುಗಳನ್ನು ಸಹಜವಾದ ರೀತಿಯಲ್ಲಿ ಅನುಭವಿಸುವುದಕ್ಕೆ ಅವಕಾಶವಿರುವ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಸಾಮಾಜಿಕ ಸಬಲೀಕರಣವೆಂದು ಭಾವಿಸಬಹುದು. ಅಂಬೇಡ್ಕರ್‌ರವರು ಬಹಳ ಪ್ರಜ್ಞಾಪೂರ್ವಕವಾಗಿ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣಕ್ಕೆ ಸಂಬಂಧಿಸಿದ ಅನೇಕ ಅಂಶಗಳನ್ನು ಸಂವಿಧಾನದ ಪೀಠಿಕೆ, ಮೂಲಭೂತ ಹಕ್ಕುಗಳು, ರಾಜ್ಯ ನಿರ್ದೇಶಕ ತತ್ವಗಳಲ್ಲಿ ಸೇರಿಸಿದ್ದಾರೆ. ಸ್ವಾತಂತ್ರ್ಯದ ಅನುಕೂಲಗಳು ಎಲ್ಲರಿಗೂ ಸಿಗುವಂತಾಗಬೇಕಾದರೆ ಸಾಮಾಜಿಕ ಸಬಲೀಕರಣ ಸಾಧನದ ಮೂಲಕ ಮಾತ್ರವೇ ಸಾಧ್ಯವಾಗುತ್ತದೆಂದು ಭಾವಿಸಿ ಸಂವಿಧಾನದ ರಚನೆಯಲ್ಲಿ ಅವುಗಳಿಗೆ ಪ್ರಾಧಾನ್ಯತೆಯನ್ನು ಕಲ್ಪಿಸಿದ್ದಾರೆ.

ಆದರೆ ಅಂಬೇಡ್ಕರ್‌ರವರು ಇದಕ್ಕೂ ಮುನ್ನ ವಿವಿಧ ಹಂತಗಳಲ್ಲಿ ಅನೇಕ ಚಳವಳಿಗಳನ್ನು ನಿರ್ಮಿಸುತ್ತ ಸಮಾಜದಲ್ಲಿ ತಳಸಮುದಾಯದ ಜನರನ್ನು ಒಗ್ಗೂಡಿಸಿ, ಅವರ ಸಮಸ್ಯೆಗಳ ವಿರುದ್ಧ ಹೋರಾಟವನ್ನು ಕೈಗೊಂಡು ಸಂವಿಧಾನದ ನಿರ್ಮಾಪಕರಾಗಿ ಈ ಅಂಶಗಳಿಗೆ ಶಾಸನಬದ್ಧವಾದ ಸ್ಥಾನವನ್ನು ಕಲ್ಪಿಸಿದರು. ಅಲ್ಲದೇ ಈ ವಿಷಯಗಳ ಜಾರಿಯಲ್ಲಿ ಸರ್ಕಾರವನ್ನು ಹೊಣೆಗಾರಿಕೆಯನ್ನಾಗಿ ಮಾಡಿದರು. ಸಮಾಜದ ಅನೇಕ ಸಮಸ್ಯೆಗಳನ್ನು, ಸೃಷ್ಟಿಸಲಾದ ಮೇಲು–ಕೀಳನ್ನು ನಿವಾರಿಸುವುದಕ್ಕೆ, ಅಸ್ಪೃಶ್ಯತೆಯನ್ನು ನಾಶ ಮಾಡಿ ಎಲ್ಲರೂ ಸಂಪೂರ್ಣ ಮಾನವರಾಗಿ ಬದುಕುವುದಕ್ಕೆ ಅವಕಾಶವುಳ್ಳ ಹೊಸ ಸಮಾಜವನ್ನು ರೂಪಿಸುವ ಕ್ರಮವನ್ನು ನಿರ್ದೇಶಿಸಿ ಸಾಮಾಜಿಕ ನ್ಯಾಯವನ್ನು ಸಾಧಿಸುವುದಕ್ಕೆ ಇರುವ ಅಡೆತಡೆಗಳನ್ನು ನಿವಾರಿಸುವುದಕ್ಕೆ ಬಾಬಾ ಸಾಹೇಬರು ಸೂಚಿಸಿದ ಕ್ರಮವನ್ನು ಕೈಗೊಳ್ಳಲು ಜನರು ಮುಂದೆ ಬರಬೇಕೆಂದು ಹಿಂದಿನಿಂದಲೇ ಒತ್ತಾಯಿಸಿದ್ದರು.

ಭಾರತಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಗತಿಸಿದರೂ ಕೂಡ ಭಾರತಿಯರೆಲ್ಲರೂ ಸಾಮಾಜಿಕ ಸಬಲೀಕರಣವನ್ನು ಸಾಧಿಸಿದರೇ? ಅದಕ್ಕೆ ಸಂಬಂಧಿಸಿದ ಸಮಸ್ತ ಹಕ್ಕುಗಳನ್ನು ಅನುಭವಿಸುತ್ತಿರುವರೇ? ಎಂಬ ಅಂಶಗಳು ಇಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತವೆ. ಭಾರತದ ಸಂವಿಧಾನದ ಪೀಠಿಕೆಯಲ್ಲಿ ನಾವು ನೈಜವಾಗಿ ಸಂವಿಧಾನವನ್ನು ಏತಕ್ಕಾಗಿ ಹೊಂದಿದ್ದೇವೆ? ಸ್ವಾತಂತ್ರ್ಯ ಗುರಿಯ ಸಾಧನೆಯಲ್ಲಿ ಭಾರತವು ಹೇಗೆ ಮುಂದಕ್ಕೆ ಸಾಗುತ್ತದೆ? ಈ ಪ್ರಶ್ನೆಗಳಿಗೆ ಉತ್ತರವಾಗಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವು ಎಲ್ಲರಿಗೆ ಸಿಗುವ ವ್ಯವಸ್ಥೆಯನ್ನು ವೈಚಾರಿಕ ನೆಲೆಗಟ್ಟಿನಲ್ಲಿ ರೂಪಿಸಿಕೊಳ್ಳಬೇಕೆಂಬುದಾಗಿದೆ. ಅವುಗಳ ಸಾಧನೆಗೆ ಯಾವ ಯಾವ ವಿಧಾನಗಳ ಮೂಲಕ ಹೇಗೆ ಸಾಧಿಸಿಕೊಳ್ಳಬಹುದೆಂದು ತಿಳಿಸುವ ಕ್ರಮ ಇದಾಗಿದೆ. ಅಂದರೆ ಅಸಮಾನತೆಯನ್ನು ನಿವಾರಿಸುವುದಕ್ಕೆ ಅನುಕೂಲವಾದ ಹಕ್ಕುಗಳು, ಸ್ವಾತಂತ್ರ್ಯಗಳು, ಅವಕಾಶಗಳು ಎಲ್ಲರಿಗೂ ವಿಶೇಷವಾಗಿ ದಲಿತರಿಗೆ ಮೊದಲು ದೊರಕಬೇಕೆಂಬುದು ಅಂಬೇಡ್ಕರ್‌ರವರ ವಿಚಾರವಾಗಿತ್ತು. ಹಾಗಾಗಿಯೇ ಸಂವಿಧಾನದ 4ನೇ ಭಾಗದಲ್ಲಿ ರಾಜ್ಯ ನಿರ್ದೇಶಕ ತತ್ವಗಳನ್ನು ಸೇರಿಸಲಾಗಿದೆ ಎಂದು ವಿವರಿಸಿರುವರು. ರಾಜ್ಯ ನಿರ್ದೇಶಕ ತತ್ವಗಳ ಪ್ರಧಾನ ಗುರಿಗಳ ಸಾಧನೆಗಾಗಿ ಸಂವಿಧಾನ ತಿದ್ದುಪಡಿ ಮೂಲಕ 9ನೇ ಅನುಚ್ಛೇದವನ್ನು ತಂದು ಆ ನಂತರ ಸಮಾನತೆ ಸಾಧನೆ, ಸಮಾನ ಅವಕಾಶಗಳು, ಆರ್ಥಿಕ ಸಮಾನತೆ ಸಾಧಿಸುವ ದಿಕ್ಕು– ದೆಸೆಯನ್ನು ನಿರ್ದೇಶಿಸಲಾಗಿದೆ ಎಂದಿರುವರು.

ಸಂವಿಧಾನದ ರಚನೆ ಮತ್ತು ಆಚರಣೆ ಕಾರ್ಯಕ್ರಮಗಳಲ್ಲಿ ಜನತಾ ಪರಮಾಧಿಕಾರ ಮತ್ತು ಜನರ ಭಾಗವಹಿಸುವಿಕೆಯ ಮೂಲಕ ಜನರು ರಾಷ್ಟ್ರ ನಿರ್ಮಾಣದಲ್ಲಿ ಪಾಲ್ಗೊಳ್ಳುವ ಅವಕಾಶವಿರುವ ವ್ಯವಸ್ಥೆಯನ್ನು ನಿರ್ಮಿಸುವ ವಿಶಾಲ ಗುರಿಯನ್ನು ಪ್ರತಿಪಾದಿಸಲಾಗಿದೆ. ಆದರೆ ವಾಸ್ತವದಲ್ಲಿ ಭೂತ ಮತ್ತು ವರ್ತಮಾನ ಚರಿತ್ರೆಗಳ ಫಲಿತದ ವಿಷಯಗಳು ನಮಗೇನು ತಿಳಿಯಪಡಿಸುತ್ತದೆ? ಎನ್ನುವ ವಿವರಗಳನ್ನು ನಾವು ಇಂದು ತಿಳಿದುಕೊಳ್ಳಬೇಕಾದ ಅಗತ್ಯವಿದೆ.

ಅಂಬೇಡ್ಕರ್ ಅವರು ಸಂವಿಧಾನ ಪೀಠಿಕೆ, ಮೂಲಭೂತ ಹಕ್ಕಗಳು ಮತ್ತು ರಾಜ್ಯ ನಿರ್ದೇಶಿತ ತತ್ವಗಳ ಮೂಲಕ ದಲಿತರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣಕ್ಕೆ ಸಂಬಂಧಿಸಿದ ಅನೇಕ ಅಂಶಗಳನ್ನು ಭಾರತದ ಸಂವಿಧಾನದಲ್ಲಿ ಅತ್ಯಂತ ಪ್ರಜ್ಞಾ ಪೂರ್ವಕವಾಗಿ ಸೇರಿಸಿದ್ದಾರೆ. ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯದ ಆಧಾರದಲ್ಲಿ. ಸ್ವಾತಂತ್ರ್ಯದ ಫಲ ಎಲ್ಲರಿಗೂ ಸಿಗಬೇಕಾದರೆ ಸಾಮಾಜಿಕ ಸಬಲೀಕರಣದ ಮೂಲಕವೇ ಸಾಧ್ಯವಾಗುತ್ತದೆಂದು ಭಾವಿಸಿ ಸಂವಿಧಾನ ರಚನೆಯಲ್ಲಿ ಅವುಗಳಿಗೆ ಪ್ರಾಧಾನ್ಯತೆಯನ್ನು ನೀಡಿರುವ ಸಂಗತಿಗಳನ್ನು ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.

**ಅಂಬೇಡ್ಕರ್ ದೃಷ್ಟಿಯಲ್ಲಿ ದಲಿತರ ಸಬಲೀಕರಣ**

ಅಂಬೇಡ್ಕರ್ ನಮ್ಮ ದೇಶದ ಶ್ರೇಷ್ಠ ಸಾಮಾಜಿಕ ತತ್ವಶಾಸ್ತ್ರಜ್ಞರಲ್ಲಿ ಒಬ್ಬರು. ಜಾತಿ ವ್ಯವಸ್ಥೆಯ ಆರಂಭ, ಬೆಳವಣಿಗೆ, ಅದು ಕೆಲಸ ಮಾಡುವ ರೀತಿ, ಅದರ ದುಷ್ಪರಿಣಾಮಗಳ ಬಗ್ಗೆ ಅವರ ಚಿಂತನೆಗಳು ಹೊಸ ಆಲೋಚನೆಗಳನ್ನು ಕೆರಳಿಸಿ, ಹೊಸ ದೃಷ್ಟಿಕೋನವನ್ನು ಅನಾವರಣಗೊಳಿಸಿವೆ. ಅಂಬೇಡ್ಕರ್ ಭಾರತದ ಸಾಮಾಜಿಕ ಚರಿತ್ರೆಯನ್ನು ಆಳವಾಗಿ ಅಧ್ಯಯನ ಮಾಡಿದ್ದಾರೆ. ಈ ಅವಗಾಹನೆಯಿಂದಲೇ ಭಾರತೀಯ ಸಾಮಾಜಿಕ ತತ್ವ ಸಿದ್ಧಾಂತದ ಅಭಿವೃದ್ಧಿಗೆ ಅವರು ಅಮೂಲ್ಯವಾದ ಹೊಸ ಅಂಶಗಳನ್ನು ಜೋಡಿಸಿದ್ದಾರೆ. ಭಾರತದ ಸಾಮಾಜಿಕ ಚರಿತ್ರೆಯಲ್ಲಿ ಮೇಲ್ಜಾತಿಯವರನ್ನು 'ಆಗಸಕ್ಕೇರಿಸುವುದು', ಕೆಳಜಾತಿಯವರನ್ನು 'ಕೀಳಾಗಿ ನೋಡಿ ಅವಮಾನಿಸುವುದು' ಬಿಟ್ಟು ಬೇರೇನೂ ಇಲ್ಲವೆಂದು ದಲಿತರ ಧ್ವನಿಯಾಗಿ ಅಂಬೇಡ್ಕರ್‌ರವರು ಹೇಳಿದ್ದಾರೆ. ಅಲ್ಲದೇ ಸ್ವಾರ್ಥಿಗಳಾದ ತಾತ್ವಿಕರ ಸ್ವ–ಪ್ರಯೋಜನಕ್ಕಾಗಿ ಜಾತಿವ್ಯವಸ್ಥೆ ಕೃತಕವಾದ ಬಿರುಕನ್ನು ಉಂಟುಮಾಡಿದೆ. ಮೇಲ್ಜಾತಿಗಳಿಗೆ ಉಪಯುಕ್ತವಾದ ಸ್ಥಾನವನ್ನು ಕಲ್ಪಿಸಿದೆ. ಸಮಾಜದ ಕೆಳಜಾತಿಗಳನ್ನು ಗುಲಾಮಗಿರಿಗೆ, ಬೆಳವಣಿಗೆಯಿಲ್ಲದ ಜಡತೆಗೆ ತಳ್ಳಿದೆ. ತೀಕ್ಷ್ಣವಾದ ಬುದ್ಧಿ, ಸಾಮಾಜಿಕ ನಾಡಿಮಿಡಿತವನ್ನು ಗುರುತಿಸುವ ನೈಪುಣ್ಯವಿರುವ ಅಂಬೇಡ್ಕರ್ ಸಂಪ್ರದಾಯಗಳಿಗೆ ಕಟ್ಟುಬಿದ್ದು, ಕಂದಾಚಾರಗಳನ್ನು, ಬದಲಾವಣೆಯನ್ನು ಅಂಗೀಕರಿಸಿದ ಸ್ವಭಾವವನ್ನುಳ್ಳ ಹಿಂದೂ ಸಾಮಾಜಿಕ ವ್ಯವಸ್ಥೆಯನ್ನು ಆಳವಾಗಿ ವಿಶ್ಲೇಷಿಸುವ ಪ್ರಯತ್ನ ಮಾಡಿ ಅಸ್ಪೃಶ್ಯರ ನಿರಾಶೆ, ನಿಸ್ಪೃಹಗಳನ್ನು ಹೆಚ್ಚಾಗಿ ದುಸ್ಥಿತಿಗೆ ತಳ್ಳಿದ ಹಿಂದೂ ಸಾಮಾಜಿಕ ವ್ಯವಸ್ಥೆ, ಧಾರ್ಮಿಕ–ಆಚಾರಗಳು ಅಮಾನುಷ, ಅವೈಜ್ಞಾನಿಕ ಮತ್ತು ಅವೈಚಾರಿಕವಾದುದೆಂದು ಅಂಬೇಡ್ಕರ್ ವಿಮರ್ಶಿಸಿದ್ದಾರೆ. ಹಾಗಂತ ಅಂಬೇಡ್ಕರ್ ಪುರಾಣಗಳಲ್ಲಿನ ಅವತಾರ ಪುರುಷರಲ್ಲ. ಅವರೂ ಕೂಡ ರಕ್ತ–ಮಾಂಸಗಳುಳ್ಳ ಸಾಮಾನ್ಯ ಮಾನವರೇ. ಅವರು ಕೂಡಾ ಆಧುನಿಕ ಶಿಕ್ಷಣವನ್ನು ಪಡೆದ ವ್ಯಕ್ತಿ. ಆರ್ಥಿಕ, ಸಾಮಾಜಿಕ, ರಾಜಕೀಯ, ನ್ಯಾಯ, ಮಾನವ ಸಂಕುಲದ

ಆಚಾರ ವ್ಯವಹಾರಗಳ ಅಧ್ಯಯನಕ್ಕೆ ಸಂಬಂಧಿಸಿದ ಶಾಸ್ತ್ರಗಳೆಲ್ಲದರಲ್ಲೂ ಪ್ರಾವೀಣ್ಯತೆಯನ್ನುಗಳಿಸಿದ ಮೇಧಾವಿಯಾಗಿರುವರು.

1920 ರಲ್ಲಿ ಛತ್ರಪತಿ ಶಾಹು ಮಹಾರಾಜರ ಸಹಾಯಪಡೆದು ಪರಿಶಿಷ್ಟರಲ್ಲಿ ಜಾಗೃತಿ ಮೂಡಿಸಲು 'ಮೂಕನಾಯಕ' ಎಂಬ ಮರಾಠಿ ಪತ್ರಿಕೆಯನ್ನು ಹೊರತಂದರು. ಈ ಪತ್ರಿಕೆ ಮೂಲಕ ಅಂಬೇಡ್ಕರ್ ತುಳಿತಕ್ಕೊಳಗಾದ ದಲಿತರನ್ನು ತಮ್ಮ ಹಕ್ಕುಗಳಿಗಾಗಿ ಹೋರಾಡುವ ರೀತಿ ಜಾಗೃತಗೊಳಿಸಿದರು. ಅವರು ಜಾತಿವ್ಯವಸ್ಥೆಯ ದುಷ್ಪರಿಣಾಮಗಳ ಕುರಿತು ಮತ್ತು ಹಿಂದೂ ಮೇಲ್ಜಾತಿಯವರು, ಪರಿಶಿಷ್ಟ ಜಾತಿಯವರಿಗೆ ಕಾನೂನು ಬದ್ಧವಾಗಿ ಸೇರಬೇಕಾದ ಹಕ್ಕುಗಳನ್ನು, ಅವಕಾಶಗಳನ್ನು ಸಿಗದಂತೆ ಮಾಡಿ ಹೊಸಕಿ ಹಾಕುತ್ತಿರುವ ವಿಧಾನವನ್ನು ಬಹಿರಂಗಗೊಳಿಸಿದರು. ಅಂತಹ ಪ್ರತಿಕೂಲ ಸ್ಥಿತಿ ಪ್ರಜಾಪ್ರಭುತ್ವಕ್ಕೆ ಯಾವ ರೀತಿ ವಿರುದ್ಧವೋ ಎಂಬುದನ್ನು ತಿಳಿಯಪಡಿಸಿದರು. 'ಮೂಕನಾಯಕ' ಪತ್ರಿಕೆ, ಸಾಮಾಜಿಕ ನ್ಯಾಯ ಪರವಾದ ಅಂಬೇಡ್ಕರ್ ಅಭಿಪ್ರಾಯಗಳನ್ನು ಹರಡುವುದಕ್ಕೆ ಒಂದು ಅದ್ಭುತವಾದ ಸಾಧನವಾಗಿ ಕೆಲಸ ಮಾಡಿತು. ಹಾಗಾಗಿಯೇ ಅಂಬೇಡ್ಕರ್ 'ಸೌತ್‌ಬರ್ ಸಮಿತಿ' ಮುಂದೆ ಸಾಕ್ಷ್ಯ ನೀಡಿದರು. ವಯಸ್ಕರ ಮತದಾನ ಹಕ್ಕು ಮತ್ತು ಪರಿಶಿಷ್ಟ ಜಾತಿಗಳಿಗೆ ಪ್ರತ್ಯೇಕ ಪ್ರಾತಿನಿಧ್ಯಕ್ಕಾಗಿ ತೀವ್ರವಾಗಿ ವಾದಿಸಿದರು. ತಮ್ಮ ಶಾಸಕರ ಆಯ್ಕೆಗಾಗಿ ಸಾಧ್ಯವಾದಷ್ಟು ಕಡಿಮೆ ವಯಸ್ಸಿನಲ್ಲಿ ಮತದಾನದ ಹಕ್ಕು ಕಲ್ಪಿಸಬೇಕೆಂದು ಅಧಿಕೃತವಾಗಿ ಕೋರಿದ ಮೊದಲ ಹಾಗೂ ಏಕೈಕ ವ್ಯಕ್ತಿಕೂಡ ಅಂಬೇಡ್ಕರರೇ ಎಂದು ಹೇಳಿದರೆ ತಪ್ಪಾಗಲಾರದು.

1926 ರ ಏಪ್ರಿಲ್ 19 ಮತ್ತು 20ರಂದು ಪರಿಶಿಷ್ಟರನ್ನು ಸಂಘಟಿಸಿ ಅಂಬೇಡ್ಕರ್ ಅವರು ಮಹಾಡ್ ನಗರದಲ್ಲಿ ಸಮ್ಮೇಳನ ಆಯೋಜಿಸಿದ್ದರು, ಇಲ್ಲಿ ಈ ಕೆರೆ ನೀರನ್ನು ನಿಮ್ನ ವರ್ಗದ ಜನ ಜಲ ಸ್ಪರ್ಶ ಮಾಡಿದಾಗ ಅಪವಿತ್ರವಾಯಿತೆಂದು ಮೇಲ್ವರ್ಗದವರು ಕೂಗಾಡಿದರು, ಅದಕ್ಕಾಗಿ ಕೆರೆಯನ್ನು ಖಾಸಗಿ ಆಸ್ತಿಯೆಂದು ಕೋರ್ಟಿನಲ್ಲಿ ದಾವೆ ಹೂಡಿದರು. ಇದು ಅಂಬೇಡ್ಕರ್ ಮೇಲೆ ಆಗಾಧ ಪ್ರಭಾವ ಬೀರಿತು. ಈ ಅನ್ಯಾಯವನ್ನು ದೊಡ್ಡ ಪ್ರಮಾಣದಲ್ಲಿ ಪ್ರತಿಭಟಿಸಬೇಕೆಂದು ನಿರ್ಧರಿಸಿ 1927ರಲ್ಲಿ 'ಬಹಿಷ್ಕೃತ ಭಾರತ್' ಎಂಬ ಪತ್ರಿಕೆಯನ್ನು ಹೊರತಂದು ನಿಮ್ನ ವರ್ಗದವರಿಗೆ ಸಾಮಾಜಿಕವಾಗಿ ಸಿಗಬೇಕಾದ ಎಲ್ಲ ಹಕ್ಕುಗಳನ್ನು ತಮ್ಮ ಬರಹಗಳಲ್ಲಿ ಪ್ರತಿಪಾದಿಸಿದರು. ಕುಡಿಯುವ ನೀರಿಗೂ ಬಹಿಷ್ಕರಿಸಿದ ಈ ಭಾರತವನ್ನು ಬಹಿಷ್ಕರಿಸುತ್ತೇವೆ. ಶತಮಾನಗಳುರುಳಿದರೂ ಜಾತೀಯತೆ ಇನ್ನು ಬೆಳೆಯುತ್ತಿರುವುದೇ ಹೊರತು, ಅದು ಅಳಿಯುವ ಲಕ್ಷಣಗಳು ಕಾಣದು ಎನ್ನುತ್ತಾರೆ. ನೆಲ, ಜಲ, ದೇವಸ್ಥಾನ ಮುಂತಾದ ಸ್ವಾಭಾವಿಕ, ಸಾರ್ವಜನಿಕ ಸ್ವತ್ತುಗಳನ್ನು ಅನುಭವಿಸಲು ಅಸ್ಪೃಶ್ಯರಿಗೂ ಸಮಾನ ಹಕ್ಕಿದೆ ಎಂದು ವಿವರಿಸುತ್ತಾರೆ. ಅಲ್ಲದೆ 1927 ರಲ್ಲೇ ಸಾಮಾಜಿಕ ಸಮಾನತೆ ಕುರಿತು ಜನರಲ್ಲಿ ಅರಿವು ಮೂಡಿಸುವುದಕ್ಕಾಗಿ ಅವರು 'ಸಮತಾ ಸಮಾಜ ಸಂಘ' ವನ್ನು ಹುಟ್ಟು ಹಾಕಿದರು, ಭಾರತದ ಹಿಂದೂ ಸಮಾಜದಲ್ಲಿ ಅಜ್ಞಾನ, ಅಸ್ಪೃಶ್ಯತೆ, ಜಾತಿಪದ್ಧತಿ, ಸ್ತ್ರೀ ಶೋಷಣೆ, ಅಂತರ್ಜಾತೀಯ ವಿವಾಹಗಳನ್ನು ಪ್ರೋತ್ಸಾಹಿಸಿದರು. ಅಂತರ್ಜಾತೀಯ ಪಂಕ್ತಿಭೋಜನಗಳ ನಿರ್ವಹಣೆಯ ಮೂಲಕ ಜನರಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಜಾಗೃತಗೊಳಿಸುವ ಪ್ರಯತ್ನ ಮುಂತಾದವುಗಳನ್ನು ಸಾಮಾಜಿಕ ಕಾನೂನುಗಳನ್ನಾಗಿ ರೂಪಿಸಿದ, ಬಹುಜನರಿಗೆ ಸ್ವಾತಂತ್ರ್ಯ, ಸಮಾನತೆಯನ್ನು ನಿರಾಕರಿಸಿದ ಶಾಸ್ತ್ರಗಳನ್ನು ಖಂಡಿಸಿ 1927ರ ಡಿಸೆಂಬರ್ 20 ರಂದು

‘ಮನುಧರ್ಮಶಾಸ್ತ್ರ’ವನ್ನು ಅವೈಜ್ಞಾನಿಕವೆಂದು ಖಂಡಿಸಿ ಬಹಿರಂಗವಾಗಿ ಸುಡುವ ಮೂಲಕ ಬದಲಾಗಬೇಕಾದ ಭಾರತದ ಸಮಾಜದ ಅನಿವಾರ್ಯತೆಯನ್ನು ತಿಳಿಸಿದರು.

ಭಾರತದಲ್ಲಿ ತುಳಿತಕ್ಕೆ ಒಳಗಾದವರ ವಿಮುಕ್ತಿಗಾಗಿ ಅಂಬೇಡ್ಕರ್ ನಡೆಸಿದ ಚಳವಳಿ ಚರಿತ್ರೆಯಲ್ಲಿ ಈ ಎರಡು ಚಳುವಳಿಗಳು ಪ್ರಾಮುಖ್ಯತೆಯನ್ನು ಪಡೆದಕೊಂಡವು. ಯಾವಾಗಲೂ ತುಳಿತಕ್ಕೊಳಗಾದ, ದಮನಕ್ಕೊಳಗಾಗಿ ಬೀದಿಗಳಲ್ಲಿ ನಡೆಯುವುದಕ್ಕೆ ಭಯದಿಂದ ನಡುಗುತ್ತಿದ್ದವರು ತಮ್ಮ ನಾಗರಿಕ ಹಕ್ಕಗಳ ಸಾಧನೆಗಾಗಿ ನಡುಕಟ್ಟಿ ಧೈರ್ಯದಿಂದ ಬೀದಿಗುಂಟ ಮೆರವಣಿಗೆಯಂತೆ ನಡೆಯುವ ಬೆಂಬಲವನ್ನು ಪಡೆದರು. ನಿರಕ್ಷಸ್ಥರು, ಶಿಕ್ಷಣವಿಲ್ಲದರು, ನಿರ್ಲಕ್ಷ್ಯಕ್ಕೆ ಗುರಿಯಾದವರು, ಮಾತಾಡುವ ಧೈರ್ಯವಿಲ್ಲದವರು, ದುರ್ಬಲರು, ತಳವರ್ಗದವರು, ಭಯ ಭ್ರಾಂತಿಗೊಳಗಾದ ಅಸ್ಪೃಶ್ಯರನ್ನು ‘ಸಾಹಸವಂತ’ರಾಗಿ ರೂಪಿಸಿದರು. ಸಾವಿರಾರು ಮಂದಿ ಅಸ್ಪೃಶ್ಯರು ನಾಗರಿಕ ಹಕ್ಕುಗಳನ್ನು ಪಡೆಯುವುದಕ್ಕಾಗಿ ಪಾಲ್ಗೊಂಡ ಈ ಎರಡು ಸತ್ಯಾಗ್ರಹಗಳು ಪರಿಶಿಷ್ಟ ಜಾತಿಗಳ (ದಲಿತರ) ವಿಮೋಚನಾ ಚಳವಳಿಯಲ್ಲಿ ಚಾರಿತ್ರಿಕ ವಿಶಿಷ್ಟತೆಯುಳ್ಳ ಘಟನೆಗಳಾಗಿ ನಿಂತವು.

ಗಾಂಧಿಜೀ ದಂಡಿ ಮತ್ತು ಉಪ್ಪಿನ ಸತ್ಯಾಗ್ರಹ ಮಾಡುವುದಕ್ಕೆ ಮೊದಲೇ ಅಂಬೇಡ್ಕರ್ ಅಸ್ಪೃಶ್ಯರ ನಾಗರಿಕ ಹಕ್ಕುಗಳಿಗಾಗಿ ಈ ಎರಡು ಸತ್ಯಾಗ್ರಹಗಳನ್ನು ನಡೆಸಿದರು. ಪರಿಶಿಷ್ಟ ಜಾತಿಯವರಿಗೆ ಸಮಾನ ಹಕ್ಕುಗಳನ್ನು ಕಲ್ಪಿಸುವುದಕ್ಕಾಗಿ, ಅವರಿಗೆ ಸಾಮಾಜಿಕ ನ್ಯಾಯ ಒದಗಿಸುವುದಕ್ಕಾಗಿ ಅಂಬೇಡ್ಕರ್ ನಡೆಸಿದ ಹೋರಾಟದಲ್ಲಿ ಈ ಎರಡು ಸತ್ಯಾಗ್ರಹಗಳು ಒಂದು ಹೊಸ ಶಕೆಗೆ ಈ ಪ್ರಸಿದ್ಧ ಘಟನೆಗಳು ಸಾಕ್ಷಿಯಾದವು. ಅಲ್ಲದೇ ಈ ಎರಡು ಸತ್ಯಾಗ್ರಹಗಳು ಸಾಧಿಸಿದ ಗೆಲುವಿನಿಂದ ಭಾರತದಲ್ಲಿ ಸಾಮಾಜಿಕ ನ್ಯಾಯಚಳವಳಿ ಚರಿತ್ರೆಯ ಪುಟದಲ್ಲಿ ಅಂಬೇಡ್ಕರ್ ಒಂದು ಹೊಸ ಅಧ್ಯಾಯಕ್ಕೆ ನಾಂದಿ ಹಾಡಿದರು. ಶೋಷಣೆಗೆ ಗುರಿಯಾದ ವರ್ಗಗಳ ಜನರ ಸಮಸ್ಯೆಗಳ, ಸಮಾನ ಹಕ್ಕುಗಳ ಸಾಧನೆಗಾಗಿ, ಸಮಾನ ಅವಕಾಶಗಳ ಸಾಧನೆಗಾಗಿ ದುಡಿದರು. ಕಾನೂನು ಸಭೆಯಲ್ಲಿ ಸೀಟುಗಳ ಮೀಸಲಾತಿ ಮೂಲಕ ಪ್ರಾತಿನಿಧ್ಯ ಪಡೆಯುವುದಕ್ಕೆ ಪ್ರತ್ಯೇಕ ಮತದಾರರ ಗುಂಪಿನ ವ್ಯವಸ್ಥೆಗೆ, ಸರ್ಕಾರಿ ಉದ್ಯೋಗಗಳಲ್ಲಿ ಪದವಿಗಳ ಮೀಸಲಾತಿಗಾಗಿ ಕೃಷಿ ಮಾಡುವುದರ ಮೂಲಕವೇ ಪರಿಹಾರವಾಗುತ್ತವೆಂದು, ಆ ಗುರಿ ಸಾಧನೆಗಾಗಿ ತಾನು ಈ ಜನರ ಹಿನ್ನಲೆಯಿಂದ ಮುಂದಕ್ಕೆ ಸಾಗಬಲ್ಲನೆಂಬ ನಂಬಿಕೆ ಉಂಟಾಯಿತು.

1928ರಲ್ಲಿ ‘ಸೈಮನ್ ಕಮಿಷನ್’ ಭಾರತಕ್ಕೆ ಬಂದಾಗ ಅಂಬೇಡ್ಕರ್ ಪರಿಶಿಷ್ಟ ಜಾತಿಗಳಿಗೆ ಮೀಸಲಾತಿ ಮತ್ತು ಸಾಮೂಹಿಕ ಮತದಾನದ ಮೂಲಕ ಆಶಿಸಿದ ಪ್ರಯೋಜವನ್ನು ಸಾಧಿಸುವ ಪ್ರಾತಿನಿಧ್ಯನ್ನು ಕಲ್ಪಿಸಬೇಕಾದ ಅವಶ್ಯಕತೆಯನ್ನು ಕುರಿತು ದೃಢವಾಗಿ ಸ್ಪಷ್ಟಪಡಿಸಿದರು. 1930, 1931 ಮತ್ತು 1932ರಲ್ಲಿ ನಡೆದ ದುಂಡುಮೇಜಿನ ಪರಿಷತ್ತಿನಲ್ಲಿ ಅಂಬೇಡ್ಕರ್ ಭಾರತ ಸ್ವಾತಂತ್ರ್ಯಕ್ಕಾಗಿ, ಪರಿಶಿಷ್ಟ ಜಾತಿಗಳಿಗೆ ರಾಜಕೀಯ ಹಕ್ಕುಗಳಿಗಾಗಿ ವಾದಿಸಿ ಚಾರಿತ್ರಿಕ ಪಾತ್ರವನ್ನು ಪೋಷಿಸಿದರು. ಅಂಬೇಡ್ಕರ್ ಪರಿಶಿಷ್ಟ ಜಾತಿಗಳಿಗೆ ರಾಜಕೀಯ ಹಕ್ಕುಗಳನ್ನು, ಸಂಪತ್ತಿನಲ್ಲೂ ರಾಜ್ಯಶಾಸನ ಸಭೆಯಲ್ಲೂ ತಕ್ಕ ಪ್ರಾತಿನಿಧ್ಯವನ್ನು, ಕೇಂದ್ರ ಮತ್ತು ರಾಜ್ಯ ಮಂತ್ರಿವರ್ಗದಲ್ಲಿ ತಕ್ಕ ಸದಸ್ಯತ್ವವನ್ನು, ಸರ್ಕಾರಿ ಸೇವೆಯಲ್ಲಿ ಉದ್ಯೋಗಗಳ

ಮೀಸಲಾತಿ ಮೂಲಕ ಸೂಕ್ತ ಪ್ರಾತಿನಿಧ್ಯವನ್ನುಗಳಿಸಿಕೊಟ್ಟ ಫಲವಾಗಿಯೇ ದಲಿತರು ಇಂದು ರಾಜಕೀಯ ಅವಕಾಶಗಳನ್ನು ಪಡೆದಂತಾಗಿದೆ.

ಸಂವಿಧಾನದಲ್ಲಿ ಅಂಬೇಡ್ಕರ್ ಸಾಮಾಜಿಕ ನ್ಯಾಯ, ಆರ್ಥಿಕ ನ್ಯಾಯ, ರಾಜಕೀಯ ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳಿಗೆ ಭರವಸೆ ನೀಡುವ ಒಂದು ಸೃಜನಾತ್ಮಕವಾದ ನಿರ್ದೇಶಕ ತತ್ವಗಳನ್ನು ರೂಪಿಸಿದರು. ನಿಮ್ನ ವರ್ಗಗಳಿಗೆ ಅಥವಾ ದಲಿತರಿಗೆ ಸಾಮಾಜಿಕ ನ್ಯಾಯ ಮತ್ತು ರಾಜಕೀಯ ಪ್ರಾತಿನಿಧ್ಯವನ್ನು ಕಲ್ಪಿಸಿಕೊಟ್ಟರು. ಅವರು ಸಂವಿಧಾನದಲ್ಲಿ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಹಿಂದುಳಿದ ವರ್ಗಗಳು, ಧಾರ್ಮಿಕ ಅಲ್ಪಸಂಖ್ಯಾತ ವರ್ಗಗಳ ಹಕ್ಕುಗಳು ಮತ್ತು ಪ್ರಯೋಜನಗಳಿಗೆ ಭಂಗ ಉಂಟಾಗದಂತೆ ಕಾಪಾಡುವುದಕ್ಕಾಗಿ ರಕ್ಷಣೆಯನ್ನು ಏರ್ಪಡಿಸಿದರು. ಗಂಡು ಮಕ್ಕಳ ಜೊತೆ ಹೆಣ್ಣು ಮಕ್ಕಳಿಗೂ ಸಮಾನ ಹಕ್ಕುಗಳನ್ನು ಕಲ್ಪಿಸುವ 'ಹಿಂದೂಕೋಡ್ ಬಿಲ್'ನ್ನು ಅಂಬೇಡ್ಕರ್ ರೂಪಿಸಿದರು.

**ಉಪಸಂಹಾರ**

ಈ ಮೇಲೆ ಚರ್ಚಿಸಿದಂತೆ ಅಂಬೇಡ್ಕರ್ ಕೈಗೊಂಡ ಸತ್ಯಾಗ್ರಹಗಳು, ದುಂಡುಮೇಜಿನ ಪರಿಷತ್ತಿನಲ್ಲಿ ಮಾಡಿದ ಚರ್ಚೆ, ಹೋರಾಟಗಳು, ಬಾಂಬೆ ಶಾಸನ ಮಂಡಳಿ, ವೈಸ್‌ರಾಯ್ ಕಾರ್ಯಕಾರಿ ಮಂಡಳಿ ಮತ್ತು ಸಂವಿಧಾನ ರಚನಾ ಸಭೆ, ಇಲ್ಲವೇ ಕಾನೂನು ಶಾಖೆ ಮಂತ್ರಿ ಪದವಿ ಮೊದಲಾದವುಗಳಲ್ಲಿ ಅವರು ಮಾಡಿದ ಕೃಷಿಯನ್ನು ಪರಿಶೀಲಿಸಿದರೆ ನಿಸ್ಸಂಶಯವಾಗಿ ತಿಳಿಯುವುದೇನೆಂದರೆ ಅವರ ದುಡಿಮೆ, ಪ್ರಯತ್ನಗಳು, ಹೋರಾಟಗಳು ಮತ್ತು ಪ್ರಚಾರ, ಇವೆಲ್ಲವೂ ಸಮಾಜದಲ್ಲಿ ದಲಿತ ಮತ್ತು ದುರ್ಬಲ ವರ್ಗಗಳಿಗೆ ಸಾಮಾಜಿಕ ನ್ಯಾಯ ಒದಗಿಸುವುದಕ್ಕಾಗಿಯೇ. ಅಂಬೇಡ್ಕರ್ ತನ್ನ ಸಾಮಾಜಿಕ ನ್ಯಾಯ ಚಿಂತನೆ ವಿಧಾನವು 'ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳನ್ನು ಎಲ್ಲ ವಲಯಗಳಲ್ಲೂ ಹೊಂದಿರಬೇಕೆಂಬ ಭರವಸೆಯನ್ನು ನೀಡುತ್ತದೆ' ಎಂದು ಸ್ಪಷ್ಟಪಡಿಸಿರುವರು. ಇಂದು ನಾವೇನಾದರೂ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಸ್ವಾತಂತ್ರ್ಯ ಸಮಾನತೆಗಳನ್ನು ತಳ್ಳಿ ಹಾಕಲು ಆರಂಭಿಸಿದರೆ, ನಾವು ನಮ್ಮ ರಾಜಕೀಯ ಪ್ರಜಾಪ್ರಭುತ್ವಕ್ಕೆ ಮುಪ್ಪು ತಂದುಕೊಂಡಂತೆಯೇ ಎಂದು ದಲಿತರ ಧ್ವನಿಯಾಗಿ, ಹಾಗೂ ದಲಿತರ ಶ್ರೇಯೋಭಿವೃದ್ಧಿಗೆ ಅಂಬೇಡ್ಕರರವರು ಈ ಹಿಂದೆಯೆ ಗಟ್ಟಿಯಾಗಿ ಹೇಳಿದರೆಂದರೆ ಅತಿಶಯೋಕ್ತಿಯಾಗಲಾರದು. ಹೀಗೆ ಅಂಬೇಡ್ಕರ್ ದಲಿತರನ್ನು ಸಬಲೀಕರಣಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಅನುಪಮಾ, ಎಚ್.ಎಸ್. (2021). *ವಿಮೋಚಕನ ಹೆಜ್ಜೆಗಳು: ಡಾ. ಬಿ.ಆರ್. ಅಂಬೇಡ್ಕರ್, ಬದುಕು–ಸಾಧನೆ.* ಲಡಾಯಿ ಪ್ರಕಾಶನ, ಗದಗ.
- *ಡಾ. ಬಾಬಾ ಸಾಹೇಬ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು.* (2010). ಸಂಪುಟ 1–10, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು.

- ಜವರಯ್ಯ ಮ.ನ. (1995). *ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ.* ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು.
- ರಂಜಾನ್ ದರ್ಗಾ. (2019). *ಬಸವಣ್ಣ ಮತ್ತು ಅಂಬೇಡ್ಕರ್.* ಲಡಾಯಿ ಪ್ರಕಾಶನ, ಗದಗ,
- ಸುಜ್ಞಾನಮೂರ್ತಿ, ಬಿ. (2020). *ಅಂಬೇಡ್ಕರ ದೃಷ್ಠಿಯಲ್ಲಿ ಸಾಮಾಜಿಕ ನ್ಯಾಯ.* ಲಡಾಯಿ ಪ್ರಕಾಶನ, ಗದಗ.
- ಸುಜ್ಞಾನಮೂರ್ತಿ, ಬಿ. (2020). *ಅಂಬೇಡ್ಕರ ದೃಷ್ಠಿಯಲ್ಲಿ ಸಾಮಾಜಿಕ ಸಬಲೀಕರಣ.* ಲಡಾಯಿ ಪ್ರಕಾಶನ, ಗದಗ.